ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 24-06-1971.

***ಅಂತರ್ಮುಖಿಯಾಗುವುದರಿಂದ ಲಾಭಗಳು*** (अन्तर्मुखी बनने से फायदे)

ಹೊಸ ಆವಿಷ್ಕಾರ ಮಾಡಿದಾಗ ಎಷ್ಟು ಶಕ್ತಿಶಾಲಿ ಆವಿಷ್ಕಾರವೋ ಅಷ್ಟು ಭೂಮಿಯ ಅಂತರ್ಭಾಗದಲ್ಲಿ ಆವಿಷ್ಕಾರವನ್ನು ಮಾಡುತ್ತಾರೆ. ತಮ್ಮದೂ ಸಹ ದಿನದಿನಕ್ಕೆ ಈ ಆವಿಷ್ಕಾರ ಶಕ್ತಿಶಾಲಿಯಾಗುತ್ತದೆ. ಅವರು ಹೇಗೆ ಭೂಗತ ಆವಿಷ್ಕಾರ ಮಾಡುತ್ತಾರೋ ಹಾಗೆ ತಾವೂ ಸಹ ಎಷ್ಟು ಭೂಗತ(ಭೂಗರ್ಭ) ಎಂದರೆ ಅಂತರ್ಮುಖಿಯಾಗಿರುವಿರೋ ಅಷ್ಟು ಹೊಸ ಅವಿಷ್ಕಾರಗಳನ್ನು ಅಥವಾ ಯೋಜನೆಗಳನ್ನು ಮಾಡಬಹುದು. ಭೂಗತವಾಗುವುದರಿಂದ ಒಂದು ವಾಯುಮಂಡಲದಿಂದ ಬಚಾವಾಗುವಿರಿ, ಎರಡನೆಯದಾಗಿ ಏಕಾಂತ ಪ್ರಾಪ್ತಿಯಾಗುವ ಕಾರಣ ಮನನ ಶಕ್ತಿಯೂ ಹೆಚ್ಚುವುದು, ಮೂರನೆಯದಾಗಿ ಮಾಯೆಯ ವಿಘ್ನದಿಂದ ಸುರಕ್ಷೆಯ ಸಾಧನವಾಗುತ್ತದೆ. ತಮ್ಮನ್ನು ಸದಾ ಭೂಗತ ಎಂದರೆ ಅಂತರ್ಮುಖಿ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ಭೂಗತದಲ್ಲಿಯೂ ಎಲ್ಲಾ ಕಾರ್ಯವ್ಯವಹಾರ ನಡೆಯುತ್ತದೆ ಹಾಗೆಯೇ ಅಂತರ್ಮುಖಿಯಾಗಿ ಕಾರ್ಯ ಮಾಡಲಾಗುತ್ತಿದೆಯೇ?ಯಾವ ಕಾರ್ಯವೂ ಮಾಡದೇ ಇರಬೇಕು ಎಂದಲ್ಲ. ಎಲ್ಲಾ ಕಾರ್ಯವೂ ನಡೆಯುವುದು. ಆದರೆ ಅಂತರ್ಮುಖಿಯಾಗಿ ಕಾರ್ಯ ಮಾಡುವುದರಿಂದ ಒಂದು ವಿಘ್ನಗಳಿಂದ ಬಚಾವ್, ಎರಡನೆಯದು ಸಮಯದ ಉಳಿತಾಯ, ಮೂರನೆಯದು ಸಂಕಲ್ಪಗಳ ಉಳಿತಾಯವಾಗುವುದು. ಅಭ್ಯಾಸವಿದೆಯಲ್ಲವೇ? ಒಮ್ಮೊಮ್ಮೆ ಅನುಭವ ಸಹ ಮಾಡುತ್ತೀರಿ. ಅಂತರ್ಮುಖಿಯಾಗಿ ಮಾತನಾಡುತ್ತೀರಿ. ಆದರೆ ಬಹಿರ್ಮುಖತೆಯಲ್ಲಿ ಬರುತ್ತಾ ಅಂತರ್ಮುಖ, ಹರ್ಷಿತಮುಖ, ಆಕರ್ಷಣಾ ಮೂರ್ತಿಯಾಗಿರುತ್ತೀರಿ ಆದರೆ ಕರ್ಮ ಮಾಡುತ್ತಾ ಈ ಅಭ್ಯಾಸ ಮಾಡಬೇಕು. ಸ್ಥೂಲ ಕಾರ್ಯ ವ್ಯವಹಾರದ ಕಾರ್ಯಕ್ರಮ ಹೇಗೆ ಮಾಡುತ್ತೀರೋ, ಹಾಗೆ ತಮ್ಮ ಬುದ್ಧಿಯ ವ್ಯವಹಾರ ಅಥವಾ ಕೆಲಸವನ್ನು ಬುದ್ಧಿಯಿಂದ ಮಾಡಬೇಕು. ಯಾವ ಕಾರ್ಯಕ್ರಮ ಮಾಡುವ ಅಭ್ಯಾಸಿಯಾಗಿರುತ್ತಾರೋ ಅವರ ಪ್ರತಿಯೊಂದು ಕಾರ್ಯ ಸಮಯಕ್ಕೆ ಸರಿಯಾಗಿ ಸಫಲವಾಗುತ್ತವೆ. ಅದೇ ರೀತಿ ತಮ್ಮದೂ ಸೂಕ್ಷ್ಮ ವ್ಯವಹಾರವಿದೆ. ಬುದ್ಧಿ ಒಂದು ಕ್ಷಣದಲ್ಲಿ ಎಲ್ಲಿಂದ ಎಲ್ಲಿಗೆ ಹೋಗಿ ಬರಬಹುದು. ಕಾರ್ಯವೂ ಬಹಳ ವಿಸ್ತಾರದ್ದಿದೆ. ಕಾರ್ಯಕ್ರಮ ಸರಿಯಾಗಿ ರೂಪಿಸಿಕೊಂಡಾಗ ಸಮಯದ ಉಳಿತಾಯ ಮತ್ತು ಸಫಲತೆ ಹೆಚ್ಚು ಸಿಗುವುದು. ಈ ಕಾರ್ಯಕ್ರಮವನ್ನು ಮಧ್ಯ ಮಧ್ಯ ಮಾಡುತ್ತೀರಿ ಆದರೆ ಸದಾಕಾಲಕ್ಕಾಗಿ ಮಾಡಿ. ಹೇಗೆ ಸ್ಥೂಲ ವ್ಯವಹಾರಗಳನ್ನು ಮಾಡಿ ಅಭ್ಯಾಸಿಯಾಗಿದ್ದೀರೋ ಹಾಗೆ ಇದನ್ನೂ ಮಾಡಿ ಆಗ ಅಭ್ಯಾಸಿಯಾಗುವಿರಿ. ಇದಕ್ಕಾಗಿ ವಿಶೇಷ ಸಮಯ ತೆಗೆಯುವ ಅವಶ್ಯಕತೆಯೂ ಇದೆ. ಹೆಚ್ಚು ಬುದ್ಧಿಯ ಯಾವುದೇ ಸ್ಥೂಲ ಕಾರ್ಯವನ್ನು ಮಾಡುವಾಗ ಈ ತಮ್ಮ ಕಾರ್ಯಕ್ರಮವನ್ನು ಆದರಲ್ಲಿ ಅಳವಡಿಸಿಕೊಳ್ಳಬಹುದು. ಕಾರ್ಯಕ್ರಮವನ್ನು ಸೆಟ್ ಮಾಡಿಕೊಳ್ಳಲು ಎಷ್ಟು ಸಮಯ ಬೇಕಾಗುತ್ತದೆ? ಒಂದೆರಡು ನಿಮಿಷ ಹೆಚ್ಚು ಬೇಕಾಗಬಹುದು. ಈ ಅಭ್ಯಾಸ ಮಾಡಬೇಕು. ಅಮೃತ ವೇಳೆ ತಮ್ಮ ಬುದ್ಧಿಯ ವ್ಯವಹಾರದ ಕಾರ್ಯಕ್ರಮವನ್ನು ಮೊದಲೇ ಸೆಟ್ ಮಾಡಿಕೊಳ್ಳಬೇಕು. ಹೇಗೆ ಕಾರ್ಯಕ್ರಮಗಳನ್ನು ಮಾಡಿದ ನಂತರ ಅದನ್ನು ಪರಿಶೀಲನೆ ಮಾಡಲಾಗುತ್ತದೆ. ಇದನ್ನು ಮಾಡಲಾಯಿತು, ಇದು ಎಲ್ಲಿಯವರೆಗೆ ಆಯಿತು, ಎಷ್ಟು ಆಗಿಲ್ಲ ಎಂದು. ಅದೇ ರೀತಿ ಈ ಕಾರ್ಯಕ್ರಮವನ್ನು ಮಾಡಿ. ಮಧ್ಯ-ಮಧ್ಯದಲ್ಲಿ ಪರಿಶೀಲನೆ ಮಾಡಿ. ಪ್ರತಿಷ್ಠಿತ ವ್ಯಕ್ತಿಗಳು ವ್ಯವಸ್ಥೆಯಿಲ್ಲದೇ(ವೇಳಾಪಟ್ಟಿ) ಕಾರ್ಯಕ್ರಮದಲ್ಲಿ ಹೋಗುವುದಿಲ್ಲ. ಹೇಗೆ ಬೇಕೋ ಹಾಗೆ ಮಾಡುವುದಿಲ್ಲ, ನಡೆಯುವುದಿಲ್ಲ. ಕಾರ್ಯಕ್ರಮದಲ್ಲಿ ಅವರ ಒಂದೊಂದು ಕ್ಷಣ ನಿಗದಿಯಾಗಿರುತ್ತದೆ. ತಾವೂ ಸಹ ಶ್ರೇಷ್ಠ ಆತ್ಮರಲ್ಲವೇ, ಕಾರ್ಯಕ್ರಮ್ ಸೆಟ್ ಆಗಿರಬೇಕು. ಕೆಲವರಿಗೆ ಕಾರ್ಯಕ್ರಮ ಮಾಡುವ ವಿಧಿ ಬರುತ್ತದೆ, ಕೆಲವರಿಗೆ ಇಲ್ಲ. ಸ್ಥೂಲ ವ್ಯವಹಾರದಲ್ಲಿಯೂ ಅದೇ ರೀತಿಯಾಗಿದೆ. ಯಾರಿಗೆ ತಮ್ಮ ಕಾರ್ಯಕ್ರಮಗಳನ್ನು ಸೆಟ್ ಮಾಡುವುದು ಬರುತ್ತದೆಯೋ ಅಷ್ಟು ಸ್ಥಿತಿಯನ್ನು ಕೂಡ ಸೆಟ್ ಮಾಡಿಕೊಳ್ಳುವ ಪದ್ಧತಿ ಬರುತ್ತದೆ. ಕೆಲವರಿಗೆ ಬರುತ್ತಿಲ್ಲ.

ಕಾರ್ಯಕ್ರಮವನ್ನು ಮೊದಲೇ ನಿರ್ಣಯ ಮಾಡದಿದ್ದರೆ ಕೆಲಸಗಳೆಲ್ಲಾ ಹೇಗೆ ಮೇಲೆ ಕೆಳಗೆ ಆಗುತ್ತದೆಯೋ ಹಾಗೆಯೇ ಸ್ಥಿತಿಯೂ ಮೇಲೆಕೆಳಗೆ ಆಗುತ್ತದೆ, ಸ್ಥಿರವಾಗಿರುವುದಿಲ್ಲ. ಒಳ್ಳೆಯದು.

ಅವ್ಯಕ್ತ ಮುರಳಿ 24-06-1971

***ಅಂತರ್ಮುಖಿಯಾಗುವುದರಿಂದ ಲಾಭಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ವಾಯುಮಂಡಲದ ರಕ್ಷಣೆಯಿಂದ, ಏಕಾಂತವಾಗಿ ಇರುವ ಕಾರಣ ಮನನ ಶಕ್ತಿ ಮತ್ತು ಮಾಯೆಯ ವಿಘ್ನಗಳಿಂದ ರಕ್ಷಣೆಯನ್ನು ಹೊಂದಿರುವ ಅಂತರ್ಮುಖಿ ಸ್ವರೂಪ.

2. ನಾನು ಅಂತರ್ಮುಖಿಯಾಗಿ ಕಾರ್ಯವನ್ನು ಮಾಡುವುದರಿಂದ ವಿಘ್ನಗಳಿಂದ ರಕ್ಷಣೆ, ಸಮಯದ ಉಳಿತಾಯ, ಸಂಕಲ್ಪಗಳ ಉಳಿತಾಯವನ್ನು ಮಾಡಿಕೊಂಡಿದ್ದೇನೆ.

3. ನಾನು ಬಹಿರ್ಮುಖತೆಯಲ್ಲಿ ಬರುತ್ತಲೂ ಅಂತರ್ಮುಖಿಯಾಗಿ, ಹರ್ಷಿತಮುಖಿಯಾಗಿ ಆಕರ್ಷಣಾ ಮೂರ್ತಿಯಾಗಿ ಇದ್ದೇನೆ.

4. ನಾನು ಪ್ರತಿಯೊಂದು ಕರ್ಮ, ಸೂಕ್ಷ್ಮ ಕಾರ್ಯ ವ್ಯವಹಾರಗಳನ್ನು ಮೊದಲೇ ತಯಾರು ಮಾಡಿಕೊಂಡು ಕಾರ್ಯಕ್ರಮದ ಅನುಸಾರವಾಗಿ ಮಾಡುತ್ತಿದ್ದೇನೆ.